VIJAYAKUMAR KANNUR
Digitally signed by VIJAYAKUMAR KANNUR
Date: 2025.12.02 11:00:56 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 29.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃಪ್ರತಿವಾದಿ 1 ರಿಂದ 5 ರವರ ಪರವಾಗಿ ಶ್ರೀವಾಯ ಎಮ ಎಚ್ ವಕೀಲರಿಂದ :**

ನಾನು ಬಿ ಎ ಪದವಿದರನಾಗಿರುವೆನು.ಈ ದಾವೆ ದಾಖಲು ಮಾಡುವ ಸಮಯದಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ನಾನು ಪರಿಶೀಲಿಸಿರುವೆನು. ಈ ದಾವಾ ಆಸ್ತಿಗಳಿಗೆ ಆ ಪಹಣಿ ಪತ್ರಿಕೆಯಲ್ಲಿ ಇರುವ ಹೆಸರಿನ ವ್ಯಕ್ತಿಗಳೇ ಮಾಲೀಕರು ಎಂದರೆ ಸರಿಯಲ್ಲ. ನನ್ನ ಅಜ್ಜ ಮಾಲೀಕನಾಗಿರುವನು. ಈಗಾಗಲೇ ನಮ್ಮ ಕುಟುಂಬದ ಸಂದಸ್ಯರ ಮದ್ಯೆ ಸಾಕಷ್ಟು ವ್ಯಾಜಗಳು ನ್ಯಾಯಾಲಯದಲ್ಲಿ ದಾಖಲಾಗಿರುವವು ಎಂದರೆ ಸರಿ. ಅವು ನನ್ನ ತಂದೆಯ ಆಸ್ತಿಗೆ ಸಂಬಂಧಪಟ್ಟಂತೆ ಇರುವವು, ಈ ದಾವೆಯು ನನ್ನ ಅಜ್ಜನ ಆಸ್ತಿಗೆ ಸಂಬಂಧಪಟ್ಟಂತೆ ದಾಖಲು ಮಾಡಿರುವೆವು. ಈ ದಾವೆಯ ಪ್ರತಿವಾದಿ 2 ರಿಂದ 5 ರವರು ಅಸಲು ದಾವಾ ನಂ.2/2014 ರ ದಾವೆ ನಿಪಿ-10 ರಂತೆ ದಾಖಲು ಮಾಡಿದ್ದು, ಅದು ರಾಜೀಯಲ್ಲಿ ಕೊನೆಗೊಂಡಿರುವುದು ಎಂದರೆ ಸರಿ. ನಿಪಿ-10 ರ ದಾಖಲೆಯ ಪ್ರಕಾರ ನಾನು ನನ್ನ ತಂದೆಯ ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ರೂ.16,50,000/- ಹಣ ಪಡೆದು ಕೊಂಡಿರುವುದಾಗಿ ಸಾಕ್ಷಿ ನುಡಿಯುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಾವು ನನ್ನ ತಂದೆ ಪರತಿವದಿ 1 ರವರ ಮನೆತನಕ್ಕೆ ಅವರ ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ಬರೆಸಿರುವುದಾಗಿ ಎಂದು ಸಾಕಿಃ ಉತ್ತರಿಸುವರು. ನಿಪಿ-10 ರ ಪ್ರಕಾರ ಪ್ರತಿವಾದಿ.1 ರವರ ಆಸ್ತಿಯಲ್ಲಿ ಎಲ್ಲ ಹಕ್ಕನ್ನು ಬಿಟ್ಟುಕೊಟ್ಟಿದರು ಸಹಿತ ಬಿಟ್ಟು ಕೊಟ್ಟಿಲ್ಲಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತಾ ಸಕ್ತಿ ಇರುವುದಿಲ್ಲಎಂದರೆ ಸರಿಯಲ್ಲ. ಮೃತ ನನ್ನ ತಂದೆ ಬೆಂಕಪ್ಪ ಮತ್ತು ನನ್ನ ಅಜ್ಜಿ ಗೌರವ್ವ ನನ್ನ ಅಜ್ಜ ಕಿಡಿಯಪ್ಪ ನ ಆಸ್ತಿಯಲ್ಲಿಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಿಸ್ಸೆಯ ಬದಲು ನನ್ನ ತಂದೆಯ ಕಡೆಯಿಂದ ರೂ.16,50,000/-

ಹಣ ಪಡೆದುಕೊಂಡು ನನ್ನ ಹಕ್ಕನ್ನು ನಷ್ಟ ಮಾಡಿಕೊಂಡಿದ್ದೆನೆ ಎಂದರೆ ಸರಿಯಲ್ಲ. ಈ ವಾದಿ ಪತ್ರದಲ್ಲಿನ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಎಲ್ಲ ಸಂಗತಿಗಳು ನಿಜ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 5 ರವರಿಗೆ ತೊಂದರೆ ನೀಡುವ ಸಲುವಾಗಿ ನಾನು ಈ ಸುಳ್ಳು ದಾವೆ ದಾಖಲು ಮಾಡಿ ಸುಳ್ಳು ಸಾಕ್ಷಿನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.12.02 11:01:05 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ